# ಗುಲಬರ್ಗಾ ವಿಶ್ವವಿದ್ಯಾಲಯ ಕಲಬುರಗಿ

ಪರೀಕ್ಷಾ ವಿಭಾಗ, ಜ್ಞಾನ ಗಂಗಾ, ದೂರವಾಣಿ ಸಂಖ್ಯೆ: 08472-263203

ಸಂಖ್ಯೆ:ಗುವಿಗು:ಪರೀಕ್ಷಾ:ಸಿ1(14)/2014-15/ 10483 ದಿನಾಂಕ: 10.03.2015

## ಅಧಿಸೂಚನೆ

ವಿಷಯ: ಎಪ್ರೀಲ್ 2015ರಲ್ಲಿ ನಡೆಯುವ ಬಿ.ಪಿ.ಎಡ್ ದ್ವಿತೀಯ ಮತ್ತು ಪ್ರಥಮ ಸೆಮಿಸ್ಟರ್ ಪರೀಕ್ಷೆಗಳ ಬಗ್ಗೆ.
ಉಲ್ಲೇಖ: ಕುಲಪತಿಗಳ ಅನುಮೋದನೆ ದಿನಾಂಕ 09.03.2015

ಎಪ್ರೀಲ್ 2015ರಲ್ಲಿ ನಡೆಯುವ ಬಿ.ಪಿ.ಎಡ್. ದ್ವಿತೀಯ ಮತ್ತು ಪ್ರಥಮ ಸೆಮಿಸ್ಟರ ಪರೀಕ್ಷೆಯ ಪರೀಕ್ಷಾ ಅರ್ಜಿಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ ಹಾಗೂ ಪರೀಕ್ಷೆಗಳು ಪ್ರಾರಂಭವಾಗುವ ದಿನಾಂಕ ಮುಂತಾದ ವಿವರಗಳನ್ನು ತೋರಿಸುವ ಪಟ್ಟಿ.

| ಕ್ರ.ಸಂ. ಪರೀಕ್ಷೆ | ಪರೀಕ್ಷಾ ಶುಲ್ಕ ರೂ. | ಅಂಕಪಟ್ಟಿ ಶುಲ್ಕ ಹಾಗು ಅರ್ಜಿ ತಪಾಸಣೆ ಶುಲ್ಕ ರೂ. | ಪರೀಕ್ಷೆ ಪ್ರಾರಂಭವಾಗುವ ದಿನಾಂಕ | | ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕದೊಡನೆ ಕಾಲೇಜಿನಲ್ಲಿ ಪರೀಕ್ಷಾ ಅರ್ಜಿ ಸಲ್ಲಿಸಬೇಕಾದ ಅಂತಿಮ ದಿನಾಂಕ | | ಪ್ರಾಂಶುಪಾಲರು ಪರೀಕ್ಷಾ ಶುಲ್ಕದೊಡನೆ ಅಭ್ಯರ್ಥಿಯ ಪರೀಕ್ಷಾ ಅರ್ಜಿಗಳನ್ನು ವಿಶ್ವವಿದ್ಯಾಲಯಕ್ಕೆ ಸಲ್ಲಿಸಬೇಕಾದ ಅಂತಿಮ ದಿನಾಂಕ | |
|---|---|---|---|---|---|---|---|---|
| | | | ಲಿಖಿತ ಪರೀಕ್ಷೆ ದಿನಾಂಕ | ಪ್ರಾಯೋಗಿಕ ಪರೀಕ್ಷೆ ದಿನಾಂಕ | ದಂಡ ಶುಲ್ಕ ವಿಲ್ಲದೆ | ರೂ.100/- ದಂಡ ಶುಲ್ಕ ಸಹಿತ | ದಂಡ ಶುಲ್ಕ ವಿಲ್ಲದೆ | ರೂ.100/- ದಂಡ ಶುಲ್ಕ ಸಹಿತ |
| ೧. ಬಿ.ಪಿ.ಎಡ್ ದ್ವಿತೀಯ ಸೆಮಿಸ್ಟರ್ ಮತ್ತು ಪ್ರಥಮ ಸೆಮಿಸ್ಟರ್ | ರೂ.1080/- | ರೂ.60+12 | 17.04.2015 | 07.04.2015 | 23.03.2015 | 30.03.2015 | 25.03.2015 | 01.04.2015 |

ಮಹಾವಿದ್ಯಾಲಯಗಳ ಪ್ರಾಂಶುಪಾಲರ ಗಮನಕ್ಕಾಗಿ:

೧. ಡಿಡಿಯನ್ನು ಪಡೆಯುವ ಸಮಯ:- ಮಹಾವಿದ್ಯಾಲಯದಲ್ಲಿ ಪರೀಕ್ಷಾ ಅರ್ಜಿಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮುಗಿದ ೨ನೇ ದಿನದಂದು ಡಿಡಿಯನ್ನು ಪಡೆಯಬೇಕು. ಆ ದಿನವೂ ರಜೆ ಇದ್ದರೆ ಆದರ ಮರುದಿನದಂದು ಡಿಡಿಯನ್ನು ಪಡೆಯಬೇಕು.

೨. ಬಿ.ಪಿ.ಎಡ್ ಭಾಗಶಃ ಪರೀಕ್ಷೆ ತೆಗೆದುಕೊಳ್ಳುವ ಅಭ್ಯರ್ಥಿಗಳು ಪ್ರತಿ ಪತ್ರಿಕೆಗೆ ಶುಲ್ಕ ರೂ.150.00 ಎರಡು ಪತ್ರಿಕೆಗಳಿಗೆ ರೂ.300.00 ಹಾಗೂ ಎರಡಕ್ಕಿಂತ ಹೆಚ್ಚಿನ ಪತ್ರಿಕೆಗಳಿಗೆ ಪೂರ್ಣ ಶುಲ್ಕ ಪಾವತಿಸಬೇಕು.

ಬಿ.ಪಿ.ಎಡ್ ಪರೀಕ್ಷೆಯ ಮ್ಯಾನುವಲ್/ಗಣಕೀಕೃತ ಪರೀಕ್ಷಾ ಅರ್ಜಿಗಳನ್ನು ವಿಶ್ವವಿದ್ಯಾಲಯದಿಂದ ಪಡೆಯಬಹುದು. ಪ್ರಿನ್ಸಿಪಾಲರು ಈ ಅರ್ಜಿಗಳನ್ನು ವಿಶ್ವವಿದ್ಯಾಲಯದಿಂದ ತಾವೇ ಪಡೆದುಕೊಳ್ಳುವ ವ್ಯವಸ್ಥೆ ಮಾಡಬೇಕು. ಈ ಬಗೆಯಲ್ಲಿ ಪಡೆಯಲಾದ ಗಣಕೀಕೃತ/ಮ್ಯಾನುವಲ್ ಅರ್ಜಿಗಳಿಗೆ ರೂ.40.00 ದರದಂತೆ ಪೂರ್ಣ ಪಾವತಿ ಮಾಡಿ ಕುಲಸಚಿವರು (ಮೌಲ್ಯಮಾಪನ) ಗು.ವಿ. ಗುಲಬರ್ಗಾ ಇವರಿಂದ ಪಡೆಯಬಹುದು. ಈ ಹಣವನ್ನು ವಿತ್ತಾಧಿಕಾರಿಗಳು ಗುಲಬರ್ಗಾ ವಿಶ್ವವಿದ್ಯಾಲಯ ಗುಲಬರ್ಗಾ ಇವರ ಹೆಸರಿಗೆ ಡಿ.ಡಿ. ಮೂಲಕವಾಗಲಿ ಅಥವಾ ಗುಲಬರ್ಗಾ ವಿಶ್ವವಿದ್ಯಾಲಯದ ಸ್ಟೇಟ ಬ್ಯಾಂಕ ಆಫ್ ಹೈದ್ರಾಬಾದದಲ್ಲಿ ಬ್ಯಾಂಕ ಚಾಲನ್ ಮುಖಾಂತ ಪಾವತಿಸಬಹುದು.

ಪ್ರಾಂಶುಪಾಲರು ಎಲ್ಲ ಅರ್ಜಿಗಳನ್ನು ಸಂಪೂರ್ಣ ಪರಿಶೀಲನೆಯ ನಂತರ ಪರೀಕ್ಷಾ ಶುಲ್ಕ ಹಾಗೂ ಅಂಕಪಟ್ಟಿ ಶುಲ್ಕಗಳ ಡಿ.ಡಿ. ಇಲ್ಲವೆ ಚಾಲನಗಳೊಂದಿಗೆ ದ್ವಿಪ್ರತಿ ಪಟ್ಟಿಯೊಂದಿಗೆ ನಿಗದಿತ ದಿನಾಂಕದೊಳಗಾಗಿ ಕುಲಸಚಿವರು (ಮೌಲ್ಯಮಾಪನ) ಗುಲಬರ್ಗಾ ವಿಶ್ವವಿದ್ಯಾಲಯ ಗುಲಬರ್ಗಾ ಇವರಿಗೆ ಸಲ್ಲಿಸಬೇಕು.

ಬಿ.ಪಿ.ಎಡ್ ಪರೀಕ್ಷೆಗಳಿಗೆ ಕೋರ್ಸವಾರ ಡಿ.ಡಿ.ಗಳನ್ನು ಹಾಗೂ ಪಟ್ಟಿಗಳನ್ನು ಪ್ರತ್ಯೇಕವಾಗಿ ಲಗತ್ತಿಸಬೇಕು. ಪರೀಕ್ಷೆಗೆ ಹಾಜರಾಗುವ ವಿಷಯವಾರು ಅಭ್ಯರ್ಥಿಗಳ ಸಂಖ್ಯೆ ತೋರಿಸುವ ಪಟ್ಟಿಯನ್ನು ಲಗತ್ತಿಸಬೇಕು.

ಪರೀಕ್ಷಾ ಅರ್ಜಿಗಳನ್ನು ವಿಶ್ವವಿದ್ಯಾಲಯಕ್ಕೆ ಸಲ್ಲಿಸುವಾಗ ಪ್ರಾಂಶುಪಾಲರು ಈ ಕೆಳಗಿನ ಮಾಹಿತಿಗಳನ್ನು ವಿಶೇಷವಾಗಿ ಗಮನಿಸಲು ಸೂಚಿಸಲಾಗಿದೆ.

೦೧. ಪರೀಕ್ಷಾ ಕೇಂದ್ರದ ಬದಲಾವಣೆಗೆ ಅವಕಾಶವಿರುವದಿಲ್ಲ.

೦೨. ಅಂಕಪಟ್ಟಿಗಳ ಪ್ರತಿಗಳನ್ನು ಆಯಾ ಮಹಾವಿದ್ಯಾಲಯದ ಪ್ರಾಂಶುಪಾಲರೇ ದೃಢೀಕರಿಸಬೇಕು.

೦೩. ವಿನಾಯತಿ (Exemptions) ಪಡೆದ ಬಗ್ಗೆ ಹಾಗೂ ಹಿಂದಿನ ಪರೀಕ್ಷೆಯು ಪಾಸಾದ ಬಗ್ಗೆ ದೃಢೀಕರಿಸಲ್ಪಟ್ಟ ಝರಾಕ್ಸ ಪ್ರತಿಗಳನ್ನು ಲಗತ್ತಿಸಬೇಕು.

೦೪. ವಿಶ್ವವಿದ್ಯಾಲಯಕ್ಕೆ ಅರ್ಜಿಗಳನ್ನು ಕಳುಹಿಸುವ ಮೊದಲು ಅವುಗಳನ್ನು ಚೆನ್ನಾಗಿ ಪರಿಶೀಲಿಸಬೇಕು.

೦೫. ಪರೀಕ್ಷಾ ಅರ್ಜಿಗಳ ಕ್ರಮ ಸಂಖ್ಯೆಗಳು ಅನುಕ್ರಮವಾಗಿರುವಂತೆ ನೋಡಿಕೊಳ್ಳಬೇಕು.

೦೬. ಪರೀಕ್ಷಾ ಅರ್ಜಿಗಳ ಜೊತೆ ಆಕರಣೆ ಮಾಡಿದ ಪರೀಕ್ಷಾ ಶುಲ್ಕದ ವಿವರವನ್ನು ತೋರಿಸುವ ಪಟ್ಟಿಯನ್ನು ತ್ರಿಪ್ರತಿಯಲ್ಲಿ ಲಗತ್ತಿಸಬೇಕು.

೦೭. ಪ್ರವೇಶ ಪತ್ರದ ಮೇಲೆ ಅಂಟಿಸಲ್ಪಟ್ಟಿರುವ ಅಭ್ಯರ್ಥಿಗಳ ಭಾವಚಿತ್ರದ ಮೇಲೆ ಪ್ರಾಂಶುಪಾಲರ ಸಹಿ ಇರತಕ್ಕದ್ದು.

೦೮. ಪರಿಶಿಷ್ಟ ಜಾತಿಃಪರಿಶಿಷ್ಟ ಪಂಗಡ ಹಾಗೂ ಕೆಟಗರಿ-೧, ಕೆಟಗರಿ-೨(ಎ), ಕೆಟಗರಿ-೨(ಬಿ), ಕೆಟಗರಿ-೩(ಎ), ಕೆಟಗರಿ-೩(ಬಿ), ಸಾಮಾನ್ಯ ಅಭ್ಯರ್ಥಿಗಳ ಹೆಸರುಗಳನ್ನು ಹಾಗೂ ಅವರಿಂದ ಪಡೆದ ಶುಲ್ಕದ ವಿವರಗಳನ್ನು ತೋರಿಸುವ ಪ್ರತ್ಯೇಕ ಪಟ್ಟಿ (ದ್ವಿಪ್ರತಿ) ಯನ್ನು ಕುಲಸಚಿವರು (ಮೌಲ್ಯಮಾಪನ), ಇವರಿಗೆ ಹಾಗೂ ಸದರಿ ಪಟ್ಟಿಯ ಮತ್ತೊಂದು ಪ್ರತಿಯನ್ನು ವಿತ್ತಾಧಿಕಾರಿಗಳು ಗುಲಬರ್ಗಾ ವಿಶ್ವವಿದ್ಯಾಲಯ ಗುಲಬರ್ಗಾ ಇವರಿಗೆ ಕಳುಹಿಸಿಕೊಡಬೇಕು.

ಎಸ.ಸಿ/ಎಸ.ಟಿ/ಕೆಟಗರಿ-೧, ಕೆಟಗರಿ-೨(ಎ), ಕೆಟಗರಿ-೨(ಬಿ), ಕೆಟಗರಿ-೩(ಎ) ಮತ್ತು ಕೆಟಗರಿ-೩(ಬಿ) ಗುಂಪಿಗೆ ಸೇರಿದ ವಿದ್ಯಾರ್ಥಿಗಳಿಗೆ ಪರೀಕ್ಷಾ ಶುಲ್ಕ ಪಾವತಿ ಮಾಡಲು ವಿನಾಯಿತಿ ಇರುತ್ತದೆ. ಆದರೆ ಪರೀಕ್ಷಾ ಅರ್ಜಿ ಶುಲ್ಕ, ಅಂಕಪಟ್ಟಿ ಶುಲ್ಕ ಮತ್ತು ಸ್ಕ್ರುಟನಿ ಶುಲ್ಕ ಪಾವತಿ ಮಾಡಬೇಕಾಗುತ್ತದೆ. ಸದರಿ ವಿದ್ಯಾರ್ಥಿಗಳ ಪರೀಕ್ಷಾ ಶುಲ್ಕವನ್ನು ಆಯಾ ಸರ್ಕಾರಿ ಇಲಾಖೆಗಳಿಂದ ಪಡೆದು ವಿಶ್ವವಿದ್ಯಾಲಯಕ್ಕೆ ಸಂದಾಯ ಮಾಡುವ ಜವಾಬ್ದಾರಿ ಆಯಾ ಪ್ರಾಂಶುಪಾಲರ ಹೊಣೆಯಾಗಿರುವದು. ಒಂದು ವೇಳೆ ಸಂದಾಯ ಮಾಡಿದ್ದಲ್ಲಿ ಇದನ್ನು ಆಯಾ ಕಾಲೇಜಿನಿಂದ ಭರಿಸಿಕೊಳ್ಳಲಾಗುವದು. ಶುಲ್ಕದ ವಿನಾಯಿತಿ ಪಡೆದವರ ವಿವರಗಳೊಂಡ ಪಟ್ಟಿಯ ಒಂದು ಪ್ರತಿಯನ್ನು ಹಣಕಾಸು ಅಧಿಕಾರಿ, ಗುಲಬರ್ಗಾ ವಿಶ್ವವಿದ್ಯಾಲಯ ಕಲಬುರಗಿ ಇವರಿಗೂ ಮತ್ತೊಂದು ಪ್ರತಿಯನ್ನು ಈ ವಿಭಾಗಕ್ಕೂ ಸಲ್ಲಿಸಬೇಕು. ಶುಲ್ಕ ವಿನಾಯಿತಿ ಪಡೆಯುವ ವಿದ್ಯಾರ್ಥಿಗಳು ಕಡ್ಡಾಯವಾಗಿ ಜಾತಿ ಪ್ರಮಾಣ ಪತ್ರವನ್ನು ಆಯಾ ತಹಶೀಲ್ದಾರರಿಂದ ಪಡೆದು ಅರ್ಜಿ ಜೊತೆ ಲಗತ್ತಿಸತಕ್ಕದ್ದು.

ಯಾವುದೇ ಪರಿಸ್ಥಿತಿಯಲ್ಲಿ ಅಧಿಸೂಚನೆಯಲ್ಲಿ ನಿಗದಿಪಡಿಸಿ ತಿಳಿಸಿದ ಕೊನೆಯ ದಿನಾಂಕ ಮುಗಿದ ನಂತರ ಬಂದಂತಹ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ.

ಯಾವುದೇ ಕಾರಣಕ್ಕಾಗಿ ಪರೀಕ್ಷೆಗಳು ಮುಂದೂಡಲ್ಪಟ್ಟಿದ್ದಲ್ಲಿ ಶುಲ್ಕ ಪಾವತಿಸುವ ದಿನಾಂಕಗಳು ಬದಲಾವಣೆಯಾಗುವುದಿಲ್ಲ.

ಅಭ್ಯರ್ಥಿಗಳಿಂದ ಪಾವತಿಸಲಾದ ಅರ್ಜಿ ಪರಿಶೀಲನಾ ಶುಲ್ಕ ರೂ.12*ರಲ್ಲಿ ರೂ.೮ನ್ನು ಪ್ರತ್ಯೇಕ ಹುಂಡಿ ಮುಖಾಂತರ ವಿಶ್ವವಿದ್ಯಾಲಯದ ಸ್ಟೇಟ ಬ್ಯಾಂಕ ಆಫ್ ಹೈದ್ರಾಬಾದ ಶಾಖೆಯಲ್ಲಿ ಪಾವತಿಯಾಗುವಂತೆ ಕುಲಸಚಿವರು (ಮೌಲ್ಯಮಾಪನ) ಇವರ ಹೆಸರಿನಲ್ಲಿ ಎಲ್ಲ ಪರೀಕ್ಷಾ ಅರ್ಜಿ ಪರಿಶೀಲನಾ ಶುಲ್ಕದ ಮೊತ್ತವನ್ನು ಒಂದೇ ಹಂತದಲ್ಲಿ ಕಳುಹಿಸಬೇಕು. ರೂ.೭೫೦ರ ದಂಡ ಶುಲ್ಕ ದಿನಾಂಕ ಮುಗಿದ ಮೇಲೆ ಕಳುಹಿಸಬೇಕು.

೨೦೧೪ನೇ ಸಾಲಿನಲ್ಲಿ ನಡೆಸಲಾದ ಪರೀಕ್ಷೆಗಳಲ್ಲಿ ಅನುತೀರ್ಣರಾಗಿದ್ದು ಇಲ್ಲವೇ ಪರೀಕ್ಷಾ ಫಲಿತಾಂಶ ಪ್ರಕಟವಾಗದಂತಹ ಅಭ್ಯರ್ಥಿಗಳನ್ನು ಅವರ ಪರೀಕ್ಷಾ ಫಲಿತಾಂಶ ಪ್ರಕಟವಾದ ೧೫ ದಿವಸಗಳೊಳಗಾಗಿ ಇಲ್ಲವೆ ವಿಶ್ವವಿದ್ಯಾಲಯ ನಿಗದಿಪಡಿಸಿದ ಪರೀಕ್ಷಾ ಪ್ರಾರಂಭ ದಿನಾಂಕಕ್ಕಿಂತ ಮೊದಲು (ಇವೆರಡರಲ್ಲಿ ಯಾವುದು ಮೊದಲೋ) ಅಂಥಹ ಅರ್ಜಿಗಳನ್ನು ದಂಡ ಶುಲ್ಕವಿಲ್ಲದೆ ಮಾನ್ಯ ಮಾಡಲಾಗುವುದು.

ಅರ್ಜಿಗಳು ವಿಶ್ವವಿದ್ಯಾಲಯಕ್ಕೆ ಪ್ರಾಂಶುಪಾಲರ ಮುಖಾಂತರವೇ ಸಲ್ಲಿಸತಕ್ಕದ್ದು, ಅಭ್ಯರ್ಥಿಗಳು ನೇರವಾಗಿ ಸಲ್ಲಿಸಕೂಡದು. ಅಭ್ಯರ್ಥಿಗಳು ಪರೀಕ್ಷೆಯಲ್ಲಿ ತಮ್ಮ ಉತ್ತರಗಳನ್ನು ಕೇವಲ ಇಂಗ್ಲೀಷ್ ಇಲ್ಲವೆ ಕನ್ನಡ ಮಾಧ್ಯಮದಲ್ಲಿ ಮಾತ್ರ ಬರೆಯಲು ಅವಕಾಶವಿದೆ. ಉಳಿದ ಭಾಷೆಗಳಲ್ಲಿ ಬರೆಯತಕ್ಕದ್ದಲ್ಲ ಎಂಬುದನ್ನು ಪ್ರಾಂಶುಪಾಲರು ಅಭ್ಯರ್ಥಿಗಳ ಗಮನಕ್ಕೆ ತರಬೇಕು. ವಿದ್ಯಾರ್ಥಿಗಳು ಇಂಗ್ಲೀಷ ಇಲ್ಲವೆ ಕನ್ನಡ ಮಾಧ್ಯಮದಲ್ಲಿ ಬರೆಯದೇ ಬೇರೆ ಮಾಧ್ಯಮದಲ್ಲಿ ಬರೆದರೆ ಅಂತಹ ವಿದ್ಯಾರ್ಥಿಗಳ ಉತ್ತರ ಪತ್ರಿಕೆಗಳು ಮೌಲ್ಯಮಾಪನವಾಗದೇ ಉಳಿಯುತ್ತವೆ. ಅಂಥಹ ವಿದ್ಯಾರ್ಥಿಗಳ ಪರೀಕ್ಷಾ ಫಲಿತಾಂಶವನ್ನು ಅನೂರ್ಜಿತಗೊಳಿಸಲಾಗುವುದೆಂದು ಅಭ್ಯರ್ಥಿಗಳಿಗೆ ಮನವರಿಕೆ ಮಾಡಿಕೊಡಬೇಕು. ಇದು ಭಾಷಾ ಪತ್ರಿಕೆಗಳಿಗೆ ಅನ್ವಯವಾಗುವುದಿಲ್ಲ.

ಬಿ.ಪಿ.ಎಡ್ ಎರಡನೇ ಸೆಮಿಸ್ಟರ್ ಪರೀಕ್ಷೆಗೆ ಕೂಡಲಿರುವ ವಿದ್ಯಾರ್ಥಿಗಳು ಪ್ರಾವಿಜನಲ್ ಪಾಸಿಂಗ ಸರ್ಟಿಫಿಕೇಟ ನೀಡುವ ಸಂಬಂಧ ರೂ.120 ಶುಲ್ಕವನ್ನು ಸಹ ಈ ಪರೀಕ್ಷಾ ಶುಲ್ಕದೊಡನೆ ಪ್ರತಿ ವಿದ್ಯಾರ್ಥಿಯಿಂದ ತೆಗೆದುಕೊಂಡು ವಿದ್ಯಾರ್ಥಿಗಳ ಯಾದಿಯೊಂದಿಗೆ ಸಲ್ಲಿಸಲು ತಿಳಿಸಲಾಗಿದೆ.

ಪರೀಕ್ಷಾ ಶುಲ್ಕವನ್ನು ಒಮ್ಮೆ ಪಾವತಿ ಮಾಡಿದ ನಂತರ ಯಾವುದೇ ಸಂದರ್ಭದಲ್ಲಿ ಯಾವುದೇ ಕಾರಣಕ್ಕೂ ಮರುಪಾವತಿ ಮಾಡಲಾಗುವುದಿಲ್ಲ ಇಲ್ಲವೆ ಮುಂಬರುವ ಪರೀಕ್ಷೆಗಳಿಗೆ ಹೊಂದಾಣಿಕೆ ಮಾಡಿಕೊಳ್ಳಲಾಗುವುದಿಲ್ಲ. ಅಪೂರ್ಣ ಅರ್ಜಿಗಳನ್ನು ವಿಶ್ವವಿದ್ಯಾಲಯ ಸ್ವೀಕರಿಸುವುದಿಲ್ಲ ಹಾಗೂ ಇಂತಹ ವಿಷಯಗಳಿಗೆ ಪತ್ರ ವ್ಯವಹಾರಕ್ಕೆ ಆಸ್ಪದವಿರುವುದಿಲ್ಲ.

ಪ್ರಾಂಶುಪಾಲರು ತಮ್ಮ ಕಚೇರಿಯ ಸಿಬ್ಬಂದಿಗಳಿಗೆ ಈ ಅಧಿಸೂಚನೆಯಲ್ಲಿ ತಿಳಿಸಿದ ಎಲ್ಲಾ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸಿ ವಿಶ್ವವಿದ್ಯಾಲಯದ ಪರೀಕ್ಷೆಗಳಿಗೆ ಯಾವುದೇ ತೊಂದರೆಯಾಗದಂತೆ ನೋಡಿಕೊಳ್ಳು ಹೊಣೆಗಾರಿಕೆ ಅವರದಾಗಿರಬೇಕೆಂದು ಮನವರಿಕೆ ಮಾಡಿಕೊಡುವಂತೆ ವಿನಂತಿಸಲಾಗಿದೆ.

ಕುಲಸಚಿವರು (ಮೌಲ್ಯಮಾಪನ)
ಗುಲಬರ್ಗಾ ವಿಶ್ವವಿದ್ಯಾಲಯ ಕಲಬುರಗಿ

ಗೆ,

ಪ್ರಾಂಶುಪಾಲರು, ಗುಲಬರ್ಗಾ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಬೀದರ, ರಾಯಚೂರ ಮತ್ತು ಗುಲಬರ್ಗಾ ಜಿಲ್ಲೆಗಳ ಎಲ್ಲ ಬಿ.ಪಿ.ಎಡ್. ಪದವಿ ಮಹಾವಿದ್ಯಾಲಯಗಳಿಗೆ.

ಪ್ರತಿಗಳು:

೧. ಜಂಟಿ ನಿರ್ದೇಶಕರು ಕಾಲೇಜು ಶಿಕ್ಷಣ ಇಲಾಖೆ ಗುಲಬರ್ಗಾ ವಿಶ್ವವಿದ್ಯಾಲಯ ಕಲಬುರಗಿ

೨. ವಿತ್ತಾಧಿಕಾರಿಗಳು ಗುಲಬರ್ಗಾ ವಿಶ್ವವಿದ್ಯಾಲಯ ಕಲಬುರಗಿ

೩. ಸರಕಾರಿ ಲೆಕ್ಕ ಪರಿಶೋಧಕರು ಗುಲಬರ್ಗಾ ವಿಶ್ವವಿದ್ಯಾಲಯ ಕಲಬುರಗಿ

೪. ವಿಶ್ವವಿದ್ಯಾಲಯದ ಎಲ್ಲ ಉಪಕುಲಸಚಿವರುಗಳು:ಸಹಾಯಕ ಕುಲಸಚಿವರುಗಳು ಮತ್ತು ಪರೀಕ್ಷಾ ವಿಭಾಗದ ಎಲ್ಲ ಅಧೀಕ್ಷಕರು:ವಿಷಯ ನಿರ್ವಾಹಕರು

೫. ಕುಲಪತಿಗಳ ಆಪ್ತ ಕಾರ್ಯದರ್ಶಿಗಳು:ಕುಲಸಚಿವರ:ಕುಲಸಚಿವರ (ಮೌಲ್ಯಮಾಪನ) ಅವರ ಆಪ್ತ ಸಹಾಯಕರು ಗು.ವಿ. ಕಲಬುರಗಿ

೬. ಕುಲಸಚಿವರು (ಮೌಲ್ಯಮಾಪನ) ಮೈಸೂರು:ಬೆಂಗಳೂರು:ಮಂಗಳೂರು:ಕರ್ನಾಟಕ:ಕುವೆಂಪು: ತುಮಕೂರ:ಬಿಜಾಪೂರ:ಹಂಪಿ: ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ ಮೈಸೂರು

೭. ಕಾರ್ಯದರ್ಶಿಗಳು ಕರ್ನಾಟಕ ಲೋಕ ಸೇವಾ ಆಯೋಗ ಪಾರ್ಕ ಹೌಸ ಬೆಂಗಳೂರು

೮. ಅಧೀಕ್ಷಕರು ವಿದ್ಯಾರ್ಥಿಗಳ ಕುಂದುಕೊರತೆ ವಿಭಾಗ ಪರೀಕ್ಷಾ ವಿಭಾಗ ೯. ಅಧೀಕ್ಷಕರು ಗ್ರಿವನ್ಸೆಸ್ ಸೆಲ್ ಹಣಕಾಸು ವಿಭಾಗ ಗು.ವಿ. ಕಲಬುರಗಿ

೧೦. Head, Computer Centre, G.U. Kalaburagi for information and notifying it on the University Website.